ಕೋಣಂದೂರು ಲಿಂಗಪ್ಪ, ನಾನು ಆ ಪಟಾಲಂನ ಸದಸ್ಯರು. ನಾವು ಕುಡುಮಿ ವಿದ್ಯಾರ್ಥಿಗಳೇನಲ್ಲ. ಸಂಗೀತ, ಹೋರಾಟ, ಸಾಹಿತ್ಯ ಎಲ್ಲದರಲ್ಲೂ ತೊಡಗಿಸಿಕೊಂಡಿದ್ದೆವು. ನಮಗೆ ಯಾವುದೇ ಕ್ಷೇತ್ರದಲ್ಲಿರುವ ಪ್ರತಿಭಾವಂತರು ಮೊದಲು ಕಣ್ಣಿಗೆ ಬೀಳುತ್ತಿದ್ದರು. ಹಾಗೆಯೇ ನನಗೆ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಶೆಟ್ಟರ್ ಸ್ನೇಹ ಲಭಿಸಿದ್ದು. ಆಮೇಲೆ ನಾನು ಮುಂಬಯಿಗೆ ಸರೋದ್ ವಾದಕ ಅಲೀ ಅಕ್ಬರ್ ಅವರ ಬಳಿ ಸಂಗೀತ ಕಲಿಯಲು ಹೋದೆ. ಆದರೆ ನಾನು ಹೋದ ಆರು ತಿಂಗಳಿಗೆ ನನ್ನ ಗುರುಗಳು ಅಮೆರಿಕಕ್ಕೆ ಹೋದರು. ನಂತರ ನಾನು ಮತ್ತೆ ಮೈಸೂರಿಗೆ ಹಿಂದಿರುಗಬೇಕಾಯಿತು. ಸ್ವಲ್ಪ ದಿನ ಸರೋದ್ ವಾದಕ ರಾಜೀವ್ ತಾರಾನಾಥರ ಜೊತೆ ಅವರ ಸೋದರತ್ತೆ ವರದತ್ತೆ ಮನೆಯಲ್ಲಿದ್ದೆ. ಆಮೇಲೆ ಮಹಾರಾಜ ಕಾಲೇಜ್ ಹಾಸ್ಟೆಲ್‌ಗೆ ಸಮೀಪದಲ್ಲಿಯೇ ಒಂದು ಕೋಣೆ ಬಾಡಿಗೆಗೆ ಪಡೆದು, ಅಡ್ವಾನ್ಸ್ ಕೊಟ್ಟು ಎಲ್ಲ ಆದಮೇಲೆ ಒಂದು ದಿನ ತಬಲಾ, ಸರೋದ್, ಕೊಳಲು ಆದಿಯಾಗಿ ನನ್ನ ಸಂಗೀತೋಪಕರಣಗಳ ಜೊತೆಗೆ, ಮಾತಾಜಿಯವರು (ಅಲೀ ಅಕ್ಬರ್ ಅವರ ಪತ್ನಿ) ನಾನು ಮುಂಬಯಿ ಬಿಡುವಾಗ ಹೊಲಿಸಿಕೊಟ್ಟ ಸಿಲ್ಕ್ ಜುಬ್ಬ ಹಾಕಿಕೊಂಡು ಓನರ್ ಬಳಿ ಹೋಗಿ ಮನೆಯ ಕೀ ಕೇಳಲು ಹೋದರೆ ಓನರ್ ಮುದುಕಮ್ಮ ಮನೆ ಕೊಡಲು ಬಿಲ್‌ಕುಲ್ ನಿರಾಕರಿಸಿ ಬಿಡಬೇಕೆ? ಜೊತೆಗೆ, 'ನಾವು ಬರೀ ಹೆಣ್ಣುಮಕ್ಕಳು ಇರುವುದು ಮನೆಯಲ್ಲಿ. ನಿಮ್ಮಂತಹವರಿಗೆ ಮನೆ ಕೊಡಲಿಕ್ಕೆ ಸಾಧ್ಯವಿಲ್ಲ. ಅಡ್ವಾನ್ಸ್ ವಾಪಸ್ ಇಸ್ಕೊಂಡು ಹೋಗ್ಬಿಡಿ' ಅನ್ನೋದೆ..! ಮನೆ ನೋಡಿದೀನಿ ಅಂತ ಹೇಳಿ ವರದತ್ತೆ ಮನೆಯನ್ನು ಬಿಟ್ಟು ಬಂದಿದ್ದೆ. ಇಲ್ಲಿ ನೋಡಿದ್ರೆ ಮನೆ ಕೊಡಕಾಗಲ್ಲ ಅಂತಿದ್ದಾರೆ. ಹೋಗಲಿ, ಬೇರೆ ಕಡೆ ಮನೆ ನೋಡಣ ಅಂದರೆ ಗಂಟು ಮೂಟೆ ಕಟ್ಕಂಡು ಬಂದುಬಿಟ್ಟಿದೀನಿ. ಬಟ್ಟೆ ಬರೆ ಅಂಥದ್ದೇನಿರಲಿಲ್ಲ. ಆದರೆ ಪ್ರಾಣಕ್ಕಿಂತ ಹೆಚ್ಚಾಗಿದ್ದ ಸಂಗೀತ ವಾದ್ಯಗಳು, ಕ್ಯಾಮೆರಾ ಎಲ್ಲ ಜೊತೆಗಿದ್ದವು. ಈ ಮುದುಕಿಗೆ ಹುಲಿ ಹಿಡಿಯ, ಮೊದಲೇ ಹೇಳಕ್ಕೇನಾಗಿತ್ತು. ಈಗ ಹೇಳ್ತಿದೆ ಅಂತೆಲ್ಲ ದಿಕ್ಕುಗಾಣದೆ ಯೋಚಿಸ್ತಿರಬೇಕಿದ್ರೆ ನನ್ನನ್ನು ನೋಡಿ, 'ಓಯ್ ಶಾಮಣ್ಣ ಏನಿಲ್ಲಿ?' ಅಂತ್ಹೇಳಿ ಷ. ಶೆಟ್ಟರ್ ಅದೇ ಮನೆಯ ಮಹಡಿಯಿಂದ ಕೆಳಗಿಳಿದು ಬಂದರು. ಅವರು ಅದೇ ಓನರ್ ಮನೆಯ ಮಹಡಿಯ ಇನ್ನೊಂದು ಕೋಣೆಯಲ್ಲಿ ಬಾಡಿಗೆಗಿದ್ದರು. ವಿಷಯ ತಿಳಿದುಕೊಂಡು ಅವರೆ ಓನರಮ್ಮನಿಗೆ, 'ಇವರು ತನ್ನ ಸ್ನೇಹಿತರು ತುಂಬಾ ಸಜ್ಜನರು' ಎಂದು ಹೇಳಿ, 'ನೀವು ಬಾಡಿಗೆ ಕೊಡದಿದ್ದರೆ ಸದ್ಯಕ್ಕೆ ಇವರ ತಬಲಾ, ಸರೋದ್ ನನ್ನ ಕೋಣೆಯಲ್ಲಿರಲಿ; ನಂತರ ನೋಡೋಣ' ಎಂದಿದ್ದೇ ಓನರ್ ಮಾತಿನ ವರಸೆಯೇ ಬದಲಾಯಿತು. ಶೆಟ್ಟರ್ ಅವರಿಗೆ, 'ನಿಮ್ಮ ಸ್ನೇಹಿತರು ಅಂದಮೇಲೆ ನನ್ನ ತಕರಾರು ಏನೂ ಇಲ್ಲ' ಎಂದು ಹೇಳಿ ಮನೆಯ ಬೀಗದ ಕೈ ಕೊಟ್ಟರು. ಶೆಟ್ಟರ್ ಅವರು ತಮ್ಮ ಸಜ್ಜನಿಕೆಯಿಂದ ಮನೆಯ ಓನರ್ ಅನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು ಎನ್ನುವುದಕ್ಕೆ ಈ ಘಟನೆ ಉದಾಹರಣೆ. ಆ ನಂತರದಲ್ಲಿ ನಮ್ಮಿಬ್ಬರ ಸ್ನೇಹ ಇನ್ನೂ ಗಟ್ಟಿಯಾಯಿತು. ನಾನು ಸಂಜೆಯ ವೇಳೆ ಆ ಮನೆಯಲ್ಲಿ ಸರೋದ್ ಅಭ್ಯಾಸ ಮಾಡುತ್ತಿದ್ದಾಗ ಶೆಟ್ಟರ್ ಅವರು ಎಷ್ಟೋ ಬಾರಿ ಬಂದು ಕೂತು ಕೇಳಿಸಿಕೊಳ್ಳುತ್ತಿದ್ದುದೂ ಇದೆ.

ಆ ನಂತರ ಮೂವತ್ತು ವರುಷಗಳಷ್ಟು ದೀರ್ಘಕಾಲ ಅವರಿಗೂ ನನಗೂ ಸಂಪರ್ಕವೇ ಇರಲಿಲ್ಲ. ನನ್ನ ಆತ್ಮಕಥನ 'ಮಯೂರ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಸಂದರ್ಭದಲ್ಲಿ ಇಂಗ್ಲೆಂಡ್‌ನಿಂದ ಹಿಂದಿರುಗಿದ ಅವರು ಬೆಂಗಳೂರಿನ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ದಕ್ಷಿಣಭಾರತ ಶಾಖೆಯ ನಿರ್ದೇಶಕರಾಗಿದ್ದರು. ಈ ಮೇಲಿನ ಘಟನೆ ಇರುವ ಅಧ್ಯಾಯವನ್ನು ಓದಿ ಅವರೂ ನೆನಪಿಸಿಕೊಂಡು ಖುಷಿಪಟ್ಟಿದ್ದಲ್ಲದೆ 'ಅಭಿನವ ಪ್ರಕಾಶನ'ದ ನ. ರವಿಕುಮಾರ್ ಅವರನ್ನು ಕರೆದುಕೊಂಡು ನಮ್ಮೂರು ಭಗವತಿಕೆರೆಗೆ ಬಂದರು. ಆಗಲೇ ಗೊತ್ತಾಗಿದ್ದು ಅವರು ಚಂದ್ರಗುತ್ತಿ ಬೆತ್ತಲೆ ಸೇವೆ ಬಗೆಗೆ ವಿಶೇಷ ಅಧ್ಯಯನ ನಡೆಸಿದ್ದರೆಂದು. ದಲಿತ ಸಂಘರ್ಷ ಸಮಿತಿಯ ಕೃಷ್ಣಪ್ಪನವರ